# ಆಹಾ ಸುದ್ದಿ!

★ ಸಸಿತೋಟ



ಪ.ಬಂಗಾಳದ ಗರ್‌ಬೇಟಾ ಹೆದ್ದಾರಿಯಲ್ಲಿ ಆನೆಯೊಂದು ಲಾರಿಗೆ ತಡೆಹಾಕಿ ಟಾರ್ಪಾಲಿನ್ ಬಿಚ್ಚಿ ಆಲೂಗೆಡ್ಡೆಗಳನ್ನು ಸ್ವಾಹಾ ಮಾಡಿತಂತೆ. ಪಟಾಕಿಗೂ ಜಗ್ಗದ ಆನೆ ಉಚಿತ ಊಟ ಮಾಡಿಕೊಂಡೇ ಅಲ್ಲಿಂದ ತೆರಳಿತಂತೆ.

ರೋಡೆ ದ್ವೀಪದಲ್ಲಿರುವ ಕಂಪೆನಿಯೊಂದು ಎದೆಹಾಲಿನಿಂದ ಆಭರಣ ತಯಾರಿಸಿ ಕೊಡುವುದಾಗಿ ಹೇಳಿ ನೂರಾರು ಮಹಿಳೆಯರಿಂದ ಎದೆಹಾಲು ಪಡೆದು ಎರಡು ವರ್ಷಗಳ ಕಾಲ ಸುಮ್ಮನೆ ಕೂತಿತ್ತಂತೆ. ಈಗ ಕೋರ್ಟ್ ಆ ಹಾಲನ್ನು ಆಯಾ ಮಹಿಳೆಯರಿಗೆ ವಾಪಸ್ಸು ಮಾಡಬೇಕೆಂದು ಆದೇಶ ನೀಡಿದೆಯಂತೆ. ಆಭರಣದ ಮೋಹ ಕತ್ತಿನಿಂದ ಎದೆಯವರೆಗೂ ಬಂತು!



ಬ್ರೆಜಿಲ್‌ನಲ್ಲಿ ಎತ್ತರದ ಸೇತುವೆಯ ಕೆಳಗೆ ಓಲಾಡುತ್ತ ಊಟ– ಉಪಾಹಾರ ಸವಿಯಬಹುದಂತೆ. ಓಲಾಡಲು ಅಷ್ಟೆಲ್ಲ ಕಷ್ಟಪಡುವ ಬದಲು ನೆಲದ ಮೇಲೆ ಪಾನೀಯದ ಗ್ಲಾಸೆತ್ತಿದರೂ ಸಾಕಿತ್ತು.



ಚೀನಾದಲ್ಲಿ ಬೀಯರ್ ಬಾಟಲ್‌ಗಳಿಂದ ನಿರ್ಮಿಸಿರುವ ಬೀಯರ್ ಕಾಡು. ಸುಮಾರು 30 ಸಾವಿರ ಖಾಲಿ ಬಾಟಲ್‌ಗಳನ್ನು ಬಳಸಿ ಮದ್ಯಪ್ರಿಯರನ್ನು ಆಕರ್ಷಿಸಲು ನಿರ್ಮಿಸಲಾಗಿದೆಯಂತೆ. ಖಾಲಿ ಬಾಟಲ್ ತಳದಲ್ಲಿ ಅದೇನು ಆಕರ್ಷಣೆ ಉಳಿದಿರುತ್ತದೋ!

ಶಿರಡಿ ಸಮೀಪ ಹಾದುಹೋಗುತ್ತಿದ್ದ ರೈಲಿನ ಶೌಚಾಲಯದಲ್ಲಿ 50 ಗ್ರಾಂ ತೂಕದ ಚಿನ್ನದ ಚೈನ್ ಬೀಳಿಸಿಕೊಂಡವರೊಬ್ಬರು ಚೈನ್ ಎಳೆದು ರೈಲು ನಿಲ್ಲಿಸಿದರಂತೆ. ಸ್ಟೇಶನ್ ಮಾಸ್ಟರ್ ಅಸಹಾಯಕತೆ ವ್ಯಕ್ತಪಡಿಸಿದಾಗ ಕೇಂದ್ರ ರೈಲ್ವೆ ಸಚಿವ ಸುರೇಶ್ ಪ್ರಭುಗೆ ದೂರು ಹೋಯ್ತಂತೆ. ಅಲ್ಲಿಂದ ಕರೆ ಬಂದ ಮೇಲೆ ಸ್ಟೇಶನ್ ಮಾಸ್ಟರ್ ರೈಲು ಹಳಿಯ ಪಕ್ಕ ಹುಡುಕುತ್ತ ಹೋಗಿ ಕೊನೆಗೂ 1.5 ಲಕ್ಷ ರೂಪಾಯಿ ಮೌಲ್ಯದ ಚೈನ್ ಸಿಕ್ಕಿತಂತೆ. ಶೌಚಕ್ಕೂ ಮೂರು ದಿನಗಳ ಕಾಲ ಸಿಕ್ಕಿತು ಚಿನ್ನದ ಭಾಗ್ಯ.





ಷಿಕಾಗೋದಲ್ಲಿ ಈಗ ರಬ್ಬರ್ ಬಾತುಕೋಳಿಗಳ ಡರ್ಬಿ ರೇಸ್ ಸೀಸನ್. 60 ಸಾವಿರ ರಬ್ಬರ್ ಬಾತುಕೋಳಿಗಳು ತೇಲುತ್ತ ಬೆಟ್ ಕಟ್ಟಿದವನಿಗೆ ಕಾಸು ತರುವ ರೇಸ್. ಮ್ಯಾಚ್ ಫಿಕ್ಸಿಂಗ್ ಶೂರರು ಯಾವುದರ ಅಡಿ ನುಸುಳುತ್ತಾರೋ!